371 - ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ?*

ಆ) *ಸಣ್ಣ ಕೆರೆಗಳ ದುರಸ್ತಿ ಮತ್ತು ಹೂಳೆತ್ತುವ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ;*

ಇ) *ಕೊರಟಗೆರೆ ತಾಲ್ಲೂಕಿನಲ್ಲಿ ಎಷ್ಟು ನೀರಾವರಿ ಕೆರೆಗಳ ದುರಸ್ತಿ ಮತ್ತು ಹೂಳೆತ್ತುವ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 36658.

ಆ) ಕೆರೆಗಳ ಅತಿ ಅವಶ್ಯಕ ಅಭಿವೃದ್ಧಿ (ದುರಸ್ತಿ) ಹಾಗೂ ಕೆಲವು ಕೆರೆಗಳ ಭಾಗಶಃ ಹೂಳನ್ನು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಮೂವತ್ತು ಕೆರೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಪೋಲೀಸ್ ಕ್ವಾರ್ಟರ್ಸ್

372 - ಶ್ರೀ ಬಸನಗೌಡ ಪಾಟೀಲ (ಬಿಜಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳಿಗಾಗಿ ನಿರ್ಮಿಸಲಾದ ವಸತಿಗಳೆಷ್ಟು? (ತಾಲ್ಲೂಕವಾರು ವಿವರ ನೀಡುವುದು);*

ಆ) *ಪೊಲೀಸ್ ಸಿಬ್ಬಂದಿಗಳಿಗೆ ಸರಿಯಾದ ವಸತಿ ವ್ಯವಸ್ಥೆ ಇಲ್ಲದೇ ಇರುವುದರಿಂದ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಇ) *ಹಾಗಿದ್ದಲ್ಲಿ, ಸುಸಜ್ಜಿತ ವಸತಿ ಸೌಕರ್ಯ ನೀಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು*

ಈ) *ವಿಜಾಪುರ ಜಿಲ್ಲಾ ಕೇಂದ್ರ ವಿಜಾಪುರದಲ್ಲಿರುವ ಪೊಲೀಸ್ ಸಿಬ್ಬಂದಿಗಳಿಗಾಗಿ ನಿರ್ಮಿಸಿದ ಮನೆಗಳೆಷ್ಟು? ನೀಡಿದ ಸೌಕರ್ಯಗಳೇನು? ಮುಂದಿನ ಯೋಜನೆಗಳೇನು? (ಸಂಪೂರ್ಣ ವಿವರ ನೀಡುವುದು)?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 1096. ತಾಲ್ಲೂಕವಾರು ವಿವರಗಳನ್ನು ಲಗತ್ತಿಸಿದೆ.

ಆ) ಹೌದು.

ಇ) ಪೊಲೀಸ್ ಸಿಬ್ಬಂದಿಗೆ ಸುಸಜ್ಜಿತ ವಸತಿ ಸೌಕರ್ಯವನ್ನು ಕಲ್ಪಿಸಲು ಸರ್ಕಾರವ ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮವನ್ನು 1985ನೇ ಸಾಲಿನಲ್ಲಿ ಸ್ಥಾಪಿಸಿತು. ಅದರ ಮೂಲ

ಸತಿ ಗೃಹಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಈ ನಿಗಮವು ಆಧುನಿಕ ಮಾದರಿಯಲ್ಲಿ ವಸತಿ ಗೃಹಗಳನ್ನು ನಿರ್ಮಿಸುತ್ತದೆ. ನಿಗಮಕ್ಕೆ ಸರ್ಕಾರವು ಪ್ರತಿ ವರ್ಷ ಸಹಾಯ ನವನ್ನು ನೀಡುವದಲ್ಲದೇ ಅದು ಬೇರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಗ್ಯಾರಂಟಿ ೀಡುತ್ತದೆ. ಈ ವಸತಿ ನಿಗಮದ ಮೂಲಕ ವಿಜಾಪುರ ಜಿಲ್ಲೆಯ 55 ವಸತಿ ಗೃಹಗಳ ನಿರ್ಮಾಣಕ್ಕಾಗಿ ಮಂಜೂರಾತಿ ನೀಡಲಾಗಿದೆ. ಹಾಗೂ 260 ವಸತಿ ಗೃಹಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ರ್ಕಾರದ ಪರಿಶೀಲನೆಯಲ್ಲಿ ೆದೆ. ಪೊಲೀಸ್ ವಸತಿ ನಿಗಮವು ದೊರಕಿಸಬಹುದಾದ ಆರ್ಥಿಕ ನಾಲಗಳನ್ನು ಅವಲಂಭಿಸಿ ಈ ವಸತಿ ಗೃಹಗಳನ್ನು ನಿರ್ಮಿಸುವ ಕಾರ್ಯಕ್ರಮ ಕೈಗೊಳ್ಳಲಾಗುವುದು.

ಈ) ವಿಜಾಪುರ ಜಿಲ್ಲಾ ಕೇಂದ್ರದಲ್ಲಿ ಪೊಲೀಸ್ ಸಿಬ್ಬಂದಿಗೆ ೆರುವ ವಸತಿ ಗೃಹಗಳು 385.

ಪೊಲೀಸ್ ಕಾಲೋನಿಯಲ್ಲಿ 5 ಬೋರವೆಲ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ.

ಬರುವ ವರ್ಷಗಳಲ್ಲಿ ವಿಜಾಪುರ ನಗರದಲ್ಲಿ 125 ವಸತಿ ಗೃಹಗಳನ್ನು ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅವುಗಳಲ್ಲಿ 100 ವಸತಿ ಗೃಹಗಳನ್ನು ಡಿ.ಎ.ಆರ್. ಲ್ಲಿರುವ ಪೋಲೀಸ್ ಪೇದೆಗಳಿಗೆ ಹಾಗೂ 16 ವಸತಿ ಗೃಹಗಳನ್ನು ಸಿವಿಲ್ ಪೊಲೀಸ್ ಪೇದೆಗಳಿಗೆ ಮತ್ತು ಉಳಿದವುಗಳು ಪಿ.ಎಸ್.ಐ: ಸಿ.ಪಿ.ಐ; ಡಿ.ಎಸ್.ಪಿ. ಮೊದಲಾದ ಅಧಿಕಾರಿಗಳಿಗೆಂದು ರ್ಮಿಸುವ ಪ್ರಸ್ತಾವನೆ ೆದೆ.

ಅನುಬಂಧ

ವಿಜಾಪುರ ಜಿಲ್ಲೆಯ ತಾಲ್ಲೂಕುವಾರು ವಸತಿ ಸೌಕರ್ಯ ವಿವರಗಳು

ಕ್ರಮ ಸಂಖ್ಯೆ	ತಾಲ್ಲೂಕುಗಳ ಹೆಸರು	ಎಸ್.ಪಿ.	ಡಿ.ಎಸ್.ಪಿ.	ಸಿ.ಪಿ.ಐ.	ಪಿ.ಎಸ್.ಐ. ಎ.ಎಸ್.ಪಿ	ಹೆಚ್.ಸಿ	ಪಿಸಿ	ಒಟ್ಟು ಮನೆಗಳು
1.	ವಿಜಾಪುರ	-	-	2	6	62	345	415
2.	ಇಂಡಿ	-	1	1	—	14	56	72
3.	ಸಿಂದಗಿ	-	-	-	1	13	46	60
4.	ಬಸವನ ಬಾಗೇವಾಡಿ	-	-	-	1	7	28	36
5.	ಮುದ್ದೇಬಿಹಾಳ್	-	-	-	1	—	22	23
6.	ಬಾಗಲಕೋಟೆ	-	1	1	3	22	98	125
7.	ಹುನಗುಂದ	-	-	-	1	8	62	71
8.	ಬದಾಮಿ	-	-	-	2	14	67	83
9.	ಜಮಖಂಡಿ	-	1	1	1	14	91	108
10.	ಮುಧೋಳ	-	-	1	1	15	67	84
11.	ಬೀಳಗಿ	-	-	1	1	—	18	19
								1096